**ಸಾಕ್ಷಿಯನ್ನು ದಿನಾಂಕ 09.03.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆಯ ಹೆಸರು ಕರಿಯಪ್ಪ ತಂದೆ ಫಕೀರಪ್ಪ ಹರಿಜನ ಆಗಿರುತ್ತದೆ. ನನ್ನ ತಂದೆ ಮೃತಪಟ್ಟು 30 ವರ್ಷಗಳಾಗಿರುತ್ತವೆ. ನನ್ನ ತಾಯಿ ಮೃತಪಟ್ಟು 6 ವರ್ಷಗಳಾಗಿರುತ್ತವೆ.

ನನ್ನ ತಂದೆಗೆ ಒಂದು ಮನೆ ಆಸ್ತಿ ಮತ್ತು ಒಂದು ಜಮೀನು ಇದ್ದವು. ಸದರಿ ಮನೆ ಮತ್ತು ಜಮೀನು ಸರಕಾರದಿಂದ ಮಂಜೂರಾಗಿದ್ದವು. ನಾನು ಹಾಜರುಪಡಿಸಿದ ಜಮೀನಿನ ಉತಾರಿನಲ್ಲಿ ನನ್ನ ತಂದೆಯ ಹೆಸರು ಇರುವುದಿಲ್ಲ ಅಂದರೆ ನನ್ನ ತಂದೆಯ ಹೆಸರನ್ನು ತೆಗೆಸಿರುತ್ತಾರೆ. ನನ್ನ ತಂದೆಯ ಹೆಸರನ್ನು ಉತಾರಿನಿಂದ ತೆಗೆದು ಹಾಕಿದ ಬಗ್ಗ ನಾನು ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ಕೆಂಚಪ್ಪ ಫಕೀರಪ್ಪ ಹರಿಜನ ಅಂದರೆ ನನ್ನ ಅಣ್ಣ. 1994 ರಿಂದ 2000-2001 ರ ಅವಧಿವರೆಗೆ ಜಮೀನಿನ ಉತಾರಿನಲ್ಲಿ ಕೆಂಚಪ್ಪ ಫಕೀರಪ್ಪ ಹರಿಜನರವರ ಹೆಸರು ದಾಖಲಾಗಿರುತ್ತದೆ ಅಂದರೆ ಸರಿ. ಸಾಕ್ಷಿ ನಂತರ ಕೆಂಚಪ್ಪ ಫಕೀರಪ್ಪ ಹರಿಜನ ಯಾರೆಂದು ತಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯನ್ನು ತಹಶೀಲ್ದಾರ ಧಾರವಾಡರವರು ಕೆಂಚಪ್ಪ ಫಕೀರಪ್ಪ ಹರಿಜನರವರಿಗೆ ಮಂಜೂರು ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಮ್ಮ ತಂದೆಗೆ ಮಂಜೂರಾಗಿರುತ್ತದೆ ಎನ್ನುತ್ತಾರೆ. ಯಲ್ಲಪ್ಪ ತಂದೆ ಯಲ್ಲಪ್ಪ .....

-ಹರಿಜನರವರು ದಾವಾ ಆಸ್ತಿಯ ಬಾಜು ಜಮೀನಿನವರು ಆಗಿರುತ್ತಾರೆ. ಸಾವಮ್ಮ ಕರಿಯಪ್ಪ ಹರಿಜನ ಅಂದರೆ ನನ್ನ ತಾಯಿ. ಕೆಂಚಪ್ಪ ಫಕೀರಪ್ಪ ಹರಿಜನ ಅಂದರೆ ಯಾರು ಎಂಬ ಬಗ್ಗೆ ಪ್ರಶ್ನೆಗೆ ಸಾಕ್ಷಿಯು ಫಕೀರಪ್ಪ ತಮ್ಮ ಅಣ್ಣನಾಗಿದ್ದು ಕೆಂಚಪ್ಪ ಫಕೀರಪ್ಪ ಹರಿಜನ ಯಾರೆಂದು ತಮಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಕೆಂಚಪ್ಪ ಫಕೀರಪ್ಪ ಹರಿಜನರವರ ಮರಣ ಪ್ರಮಾಣ ಪತ್ರವನ್ನು ಮತ್ತು ವಾರಸಾ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಕೆಂಚಪ್ಪರವರ ಪತ್ನಿ ಇರುತ್ತಾರೆ. ಸದರಿ ಕೆಂಚಪ್ಪರವರ ಪತ್ನಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಅಣ್ಣ ಫಕೀರಪ್ಪರವರ ಪತ್ನಿ ಬದುಕಿರುತ್ತಾರೆ. ಅವರನ್ನು ವಾರಸಾ ಪ್ರಮಾಣ ಪತ್ರದಲಿಲ ತೋರಿಸಿರುತ್ತೇವೆ. ಜಮೀನು ಮತ್ತು ಮನೆ ಫಕೀರಪ್ಪರವರ ಪತ್ನಿಗೂ ಸೇರಿರುತ್ತದೆ ಅಂದರೆ ಸರಿ. ಸರ್ವೆ ನಂಬರ್ 147 ದಾವಾ ಜಮೀನಿನ ಬಾಜು ಜಮೀನಿನವರಾದ ನಿಂಗಪ್ಪ ಹರಿಜನರವರ ಜಮೀನಾಗಿರುತ್ತದೆ.

ದಾವಾ ಜಮೀನು ನಮ್ಮ ತಂದೆಗೆ ಮಂಜೂರಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಜಮೀನು ಕರಿಯಪ್ಪ ಫಕೀರಪ್ಪ ಹರಿಜನರವರಿಗೆ ಮಂಜೂರಾಗಿರುತ್ತದೆ. ನನ್ನ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇರುತ್ತೇವೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.